# ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು

# KARNATAKA LEGISLATIVE COUNCIL DEBATES

## ಅಧಿಕೃತ ವರದಿ

## OFFICIAL REPORT

**೧೩೦ ನೇ ಅಧಿವೇಶನ**

**130th SESSION**

**ಸಂಪುಟ–೪೪೫ ಕ್ರಮಾಂಕ (೩)**

**Volume -445 (No. 3)**

**( ೧೫ ನೇ ಜುಲೈ ೨೦೧೬)**

**(15th -July- 2016)**

**ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಬೆಂಗಳೂರು**

**Karnataka Legislative Council Secretariat, Bangalore**

ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ **15**ನೇ ಜುಲೈ **2016**

ಶುಕ್ರವಾರ

ವಿಷಯಾನುಕ್ರಮಣಿಕೆ


**1.** ನಿಯಮ **68**ರ ಮೇರೆಗೆ **2-9**

ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಮತ್ತು ಪೊಲೀಸ್ ವ್ಯವಸ್ಥೆ ಕುಸಿದಿದ್ದು, ಪ್ರಾಮಾಣಿಕ ಅಧಿಕಾರಿಗಳಿಗೆ ರಕ್ಷಣೆ ಇಲ್ಲದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಹಾಗೂ ಸ್ವಯಂ ನಿವೃತ್ತಿಯಾಗುತ್ತಿರುವ ಪರಿಸ್ಥಿತಿ ಮುಂದುವರೆದ ಧರಣಿ

ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)

ಡಾ|| ಜಿ.ಪರಮೇಶ್ವರ್ (ಗೃಹ ಸಚಿವರು)

ಶ್ರೀ ಬಸವನಗೌಡ ಆರ್.ಪಾಟೀಲ್(ಯತ್ನಾಳ್)

ಶ್ರೀ ಬಸವರಾಜ ಹೊರಟ್ಟಿ

ಶ್ರೀ ಕೆ.ಬಿ.ಶಾಣಪ್ಪ

ಶ್ರೀ ಪುಟ್ಟಣ್ಣ

ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು)

**2.** ಪ್ರಕಟಣೆಗಳು **9-10**

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು **10**

**4.** ಶಾಸನ ರಚನೆ **10-14**

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

(ಅ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2016

ಡಾ|| ಜಿ.ಪರಮೇಶ್ವರ್ (ಸಭಾ ನಾಯಕರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

(ಆ) ಕರ್ನಾಟಕ ಸ್ಟಾಂಪು (ನಾಲ್ಕನೇ ತಿದ್ದುಪಡಿ) ವಿಧೇಯಕ, 2016 ಬಗ್ಗೆ

ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

(ಇ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ (ತಿದ್ದುಪಡಿ) ವಿಧೇಯಕ, 2016.

ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ನಗರಾಭಿವೃದ್ಧಿ ಸಚಿವರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

(ಈ) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2016

ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು)

**5.** ವಿಧೇಯಕವನ್ನು ಹಿಂದಕ್ಕೆ ಪಡೆಯುವುದು **15**

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ,2014

ಡಾ|| ಜಿ.ಪರಮೇಶ್ವರ್ (ಸಭಾ ನಾಯಕರು, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

(ವಿಧೇಯಕ ಹಿಂಪಡೆಯಲಾಯಿತು**)**

# ಕರ್ನಾಟಕ ವಿಧಾನ ಪರಿಷತ್ತು

ಶುಕ್ರವಾರ 15ನೇ ಜುಲೈ 2016

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 35 ನಿಮಿಷಕ್ಕೆ ಸಮಾವೇಶಗೊಂಡಿತು

ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಯವರು ಪೀಠದಲ್ಲಿ ಉಪಸ್ಥಿತರಿದ್ದರು.

**1. ನಿಯಮ 68ರ ಮೇರೆಗೆ**

**ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಮತ್ತು ಪೊಲೀಸ್ ವ್ಯವಸ್ಥೆ ಕುಸಿದಿದ್ದು, ಪ್ರಾಮಾಣಿಕ ಅಧಿಕಾರಿಗಳಿಗೆ ರಕ್ಷಣೆ ಇಲ್ಲದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಹಾಗೂ ಸ್ವಯಂ ನಿವೃತ್ತಿಯಾಗುತ್ತಿರುವ ಪರಿಸ್ಥಿತಿ ಬಗ್ಗೆ ಮುಂದುವರೆದ ಧರಣಿ**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದರು.)**

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ಗಣಪತಿಯವರ ಆತ್ಮಹತ್ಯೆ ಬಗ್ಗೆ ನ್ಯಾಯ ಕೊಡುತ್ತಾರೆಯೋ ಅಥವಾ ಅನ್ಯಾಯದಲ್ಲಿಯೇ ಈ ಸರ್ಕಾರ ಮುಂದುವರೆಯುತ್ತದೆಯೋ ಎಂದು ರಾಜ್ಯದ ಜನತೆ ನೋಡುತ್ತಿದ್ದಾರೆ. ನಾನು ಗೃಹಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಮಾನ್ಯ ಜಾರ್ಜ್ ಅವರ ರಾಜಿನಾಮೆಯನ್ನು ಪಡೆದುಕೊಂಡು ಅದರ ಬಗ್ಗೆ ವರದಿಯನ್ನು ತರಿಸಿಕೊಳ್ಳಿ, ಅದರಲ್ಲಿ ಅವರು ತಪ್ಪಿತಸ್ಥರಲ್ಲ ಎಂದು ಕಂಡುಬಂದಲ್ಲಿ 3 ತಿಂಗಳಿನಲ್ಲಿ ಅವರನ್ನು ವಾಪಸ್ ತೆಗೆದುಕೊಳ್ಳಿ. ರಾಜ್ಯದ ಹಿತದೃಷ್ಟಿಯಿಂದ ಈ ರೀತಿಯಲ್ಲಿ ಹಠ ಮಾಡುವುದು ಸರಿಯಲ್ಲ. ನಾವು ಇಲ್ಲಿ ಹಠ ಮಾಡುತ್ತಿಲ್ಲ, ರಾಜ್ಯದ ಜನತೆಯ ಧ್ವನಿಯಾಗಿ ಈ ವಿಚಾರವನ್ನು ನಾವು ನಿಮ್ಮ ಮುಂದೆ ಇಡುತ್ತಿದ್ದೇವೆ. ಇಡೀ ರಾಜ್ಯದ ಎಲ್ಲಾ ಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ 99% ರಾಜಿನಾಮೆಯನ್ನು ಪಡೆಯಬೇಕೆನ್ನುವ ಜನಾಭಿಪ್ರಾಯ ಕೇಳಿ ಬರುತ್ತಿದೆ. ಜನರ ಬೇಡಿಕೆಯ ಪರವಾಗಿ ನಾವಿಲ್ಲಿ ಹೋರಾಟವನ್ನು ನಡೆಸುತ್ತಿದ್ದೇವೆ. ಆದ್ದರಿಂದ ಜಾರ್ಜ್ ಅವರ ರಾಜಿನಾಮೆ ಪಡೆಯಬೇಕೆಂದು ಗೃಹಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಶ್ರೀನಿವಾಸ ಮಾನೆ:–** ಮಾನ್ಯ ಸಭಾಪತಿಗಳೇ, ಈ ಸದನದ ಸದಸ್ಯರಲ್ಲದವರ ಹೆಸರಿನ ಭಿತ್ತಿಚಿತ್ರಗಳುಳ್ಳ ಘೋಷಣೆಗಳನ್ನು ಈ ಸದನದಲ್ಲಿ ಪ್ರದರ್ಶಿಸುವುದು ಸದನದ ಸಂಪ್ರದಾಯವಲ್ಲ. ತಾವು ಅದಕ್ಕೆ ಅನುಮತಿ ನೀಡಿದ್ದೀರಾ, ಸರ್ಕಾರದ ವತಿಯಿಂದ ಏನನ್ನು ಹೇಳಬೇಕೋ ಅದನ್ನು ಹೇಳಿದ್ದಾರೆ, ಆದ್ದರಿಂದ ಪದೇ ಪದೇ ಅದೇ ವಿಚಾರವನ್ನು ಪ್ರಸ್ತಾಪಿಸುವುದನ್ನು ಬಿಟ್ಟು, ಮುಂದಿನ ಕಲಾಪವನ್ನು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

**ಡಾ||ಜಿ.ಪರಮೇಶ್ವರ್(ಗೃಹಸಚಿವರು):–** ಮಾನ್ಯ ಸಭಾಪತಿಗಳೇ, ಸದನದಲ್ಲಿ ಪ್ರದರ್ಶಿಸುತ್ತಿರುವ ಭಿತ್ತಿಪತ್ರಗಳಲ್ಲಿ ಶ್ರೀಮತಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿಯವರ ಹೆಸರನ್ನು ಹಾಕಿಕೊಂಡಿದ್ದಾರೆ. ಅವರು ಮಾತನಾಡಲಿ, ಹೇಳಿಕೆಗಳನ್ನು ನೀಡಲಿ ನಮಗೆ ಅಭ್ಯಂತರವಿಲ್ಲ, ಆದರೆ ಈ ಸದನದ ಸದಸ್ಯರಲ್ಲದವರ ಹೆಸರನ್ನು ಇಲ್ಲಿ ಪ್ರಸ್ತಾಪ ಮಾಡುವುದು ಸೂಕ್ತವಲ್ಲ. ಬೇರೆ ಭಿತ್ತಿಪತ್ರ ಇಟ್ಟುಕೊಂಡರೆ ನಮಗೆ ಏನೂ ತೊಂದರೆ ಇಲ್ಲ, ಅವರ ಹೆಸರು ಇರುವುದು ಬೇಡ. ಇದು ಉತ್ತಮ ಸಂಪ್ರದಾಯ ಆಗುವುದಿಲ್ಲ. ಇದನ್ನು ತಾವು ಅವರಿಗೆ ತಿಳಿಸಬೇಕಾಗುತ್ತದೆ.

**ಸಭಾಪತಿಯವರು:–** ಮೊದಲನೆಯದಾಗಿ ಸದನದಲ್ಲಿ ಭಿತ್ತಿಪತ್ರ ಪ್ರದರ್ಶನ ಮಾಡುವುದು ಸರಿಯಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಗಳೇ, ತಮ್ಮ ಎದುರಿಗೆ ಹೊಸ ಸದಸ್ಯರು ನರೇಂದ್ರ ಮೋದಿಯವರ ಹೆಸರು, ಅಮಿತ್ ಷಾ ಅವರ ಹೆಸರುಗಳನ್ನು ಇಲ್ಲಿ ಪ್ರಸ್ತಾಪಿಸಿದರು, ಆಗ ಸುಮ್ಮನಿದ್ದಿರಿ. ಆಗ ಸುಮ್ಮನಿದ್ದು ಈಗ ಸತ್ಯ ಸಂಗತಿಗಳನ್ನು ಹೇಳುವ ಸಂದರ್ಭದಲ್ಲಿ ಬೇಡ ಎನ್ನುತ್ತಿದ್ದಾರೆ. ಸೋನಿಯಾ ಗಾಂಧಿ ರಾಹುಲ್ ಗಾಂಧಿಯವರು ಜಾರ್ಜ್ ಅವರ ರಾಜಿನಾಮೆ ಬೇಡ ಎಂದು ಹೇಳಿದ್ದಾರೆಯೇ?

**ಸಭಾಪತಿಯವರು:–** ಮೊದಲನೆಯದಾಗಿ ಸದನದಲ್ಲಿ ಭಿತ್ತಿಪತ್ರ ಪ್ರದರ್ಶನ ಮಾಡುವುದು ಸರಿಯಲ್ಲ. ಹಾಗೆಯೇ ಈ ಸದನದ ಸದಸ್ಯರಲ್ಲದವರ ಹೆಸರನ್ನು ಯಾರು ಉಲ್ಲೇಖ ಮಾಡಬಾರದು. ಇದನ್ನು ದಯಮಾಡಿ ಎಲ್ಲರು ಗಮನಿಸಬೇಕೆಂದು ಹೇಳುತ್ತಾ, ಮಾನ್ಯ ವಿರೋಧ ಪಕ್ಷದ ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೆ ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕೆಂದು ಈ ಸದನದ ಮುಂದಿನ ಕಲಾಪಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ.

**(ಗೊಂದಲ)**

**ಡಾ||ಜಿ.ಪರಮೇಶ್ವರ್:-** ಯಾವುದೇ ಭಿತ್ತಿಪತ್ರ ಪ್ರದರ್ಶನ ಮಾಡಬಾರದೆಂದು ಸಭಾಪತಿಯವರು ಹೇಳಿದ್ದಾರೆ, ಅದರಲ್ಲಿಯೂ ಸೋನಿಯಾ ಗಾಂಧಿ ಹಾಗೂ ರಾಜೀವ್ ಗಾಂಧಿಯವರ ಹೆಸರು ಇರುವುದನ್ನು ಪ್ರದರ್ಶನ ಮಾಡಲೇಬಾರದು. This is not correct.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೇ, ತಮ್ಮ ಆದೇಶಕ್ಕೆ ಗೌರವ ಇಲ್ಲವೇ? you have to name them. You have to name and send them out.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೇ, ತಮ್ಮ ಆದೇಶದಂತೆ ನಾವು ಭಿತ್ತಿಪತ್ರಗಳನ್ನು ಹಿಂದಕ್ಕೆ ಪಡೆಯುತ್ತೇವೆ, ಏಕೆಂದರೆ ಅದು ಸದನದ ಸಂಪ್ರದಾಯ ಅಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರನ್ನು ಹೊರಗೆ ಹೋಗಿ ಎನ್ನುವುದು ಯಾವ ಸಂಪ್ರದಾಯ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೇ, ನಿಮ್ಮ ಆದೇಶವನ್ನು ಪಾಲನೆ ಮಾಡದಿದ್ದರೆ ಅವರನ್ನು ಸದನದಿಂದ ಹೊರಕ್ಕೆ ಹಾಕಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾನಾಯಕರು ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿಯವರ ಹೆಸರಿನ ಭಿತ್ತಿಪತ್ರಗಳ ಪ್ರದರ್ಶನ ಮಾಡಬಾರದೆಂದು ಹೇಳಿದರು, ಅದನ್ನು ತೋರಿಸಿ, ತಮ್ಮ ಆದೇಶದಂತೆ ನಾವು ಹಿಂದಕ್ಕೆ ಪಡೆದೆವು. ಮುಖ್ಯಮಂತ್ರಿಗಳ ಸ್ಥಾನಕ್ಕೆ ಗೌರವ ಬರುವ ನಿಟ್ಟಿನಲ್ಲಿ ನಡೆದುಕೊಳ್ಳಬೇಕು, ಆದರೆ ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರನ್ನು ಹೊರಗೆ ಹೋಗಿ ಎಂದರೆ ಅವರ ಸ್ಥಾನಕ್ಕೆ ಗೌರವ ಸಿಗುತ್ತದೆಯೇ? ಇದಕ್ಕೆ ತಾವು ಉತ್ತರ ನೀಡಬೇಕು.

**ಡಾ||ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಗಳೇ, ನಾವು ಯಾರು ನಿಮ್ಮನ್ನು ಹೊರಗೆ ಹೋಗಬಾರದೆಂದು ಹೇಳುವುದಿಲ್ಲ. ಆದರೆ ಒಂದು ಮಾತು, ನಮ್ಮನ್ನು ನೇರವಾಗಿ ಕೊಲೆಗಡುಕರು ಎಂದು ಆಪಾದನೆ ಮಾಡಿದಾಗ ಯಾವ ಶಬ್ದದ ಬಳಕೆ ಮಾಡಬೇಕೆನ್ನುವುದನ್ನು ನೀವೇ ಹೇಳಿಕೊಡಿ. ನಾವು ಯಾರನ್ನು ಕೊಲೆ ಮಾಡಿ ಕೊಲೆಗೆಡುಕರಾಗಿದ್ದೇವೆ ಹೇಳಿ.

**ಸಭಾಪತಿಯವರು:-** ನಿನ್ನೆ ನಡೆದ ಸಂಗತಿ ಬಗ್ಗೆ ಇಂದು ಚರ್ಚೆ ಮಾಡುವುದು ಬೇಡ.

**ಶ್ರೀ ಬಸನಗೌಡ ಆರ್ ಪಾಟೀಲ್(ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):** ಮಾನ್ಯ ಸಭಾಪತಿಗಳೇ, ಕಳೆದ 3-4 ದಿವಸಗಳಿಂದ ಈ ಸದನಕ್ಕೆ ಹೊಸದಾಗಿ ಬಂದಿರುವ ಸದಸ್ಯರು ಅನೇಕ ವಿಚಾರಗಳ ಬಗ್ಗೆ ಸಮಸ್ಯೆಗಳ ಬಗ್ಗೆ ಚರ್ಚೆಯನ್ನು ಮಾಡಬೇಕಾಗಿದೆ.

**ಶ್ರೀ ಬಸನಗೌಡ ಆರ್. ಪಾಟೀಲ್ ಯತ್ನಾಳ್(ಮುಂದು):-** ನಿನ್ನೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮತ್ತು ವಿಶ್ವವಿದ್ಯಾಲಯಗಳ ಎರಡು ಪ್ರಮುಖ ವಿಧೇಯಕಗಳು ಬಂದು ಚರ್ಚೆಯಾಗದೆ ಪಾಸ್ ಆಗಿ ಹೋದವು. ಹಾಗೆ ಸಹಕಾರಿ ಸಂಸ್ಥೆಗಳ ಹೊಸ ವಿಧೇಯಕ ಇರಬಹುದು, ಇವುಗಳ ಬಗ್ಗೆ ಚರ್ಚೆ ಮಾಡಿ ನಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಇದೊಂದು ವೇದಿಕೆ. ಇವತ್ತು ರಾಜ್ಯದಲ್ಲಿ ನಿರಂತರವಾಗಿ ಪ್ರಾಮಾಣಿಕ ಅಧಿಕಾರಿಗಳ ಮೇಲೆ ಹಲ್ಲೆ ನಡೆಯುತಿದೆ, ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ರಾಜ್ಯದ ಜನ ತತ್ತರಿಸಿ ಹೋಗಿದ್ದಾರೆ. ಇದನ್ನು ಸರ್ಕಾರವು ಗಂಭೀರವಾಗಿ ತೆಗೆದುಕೊಳ್ಳಬೇಕು. ಸರ್ಕಾರ ತಕ್ಷಣ ಸಂಬಂಧಪಟ್ಟ ಮಂತ್ರಿಗಳಿಂದ ರಾಜೀನಾಮೆಯನ್ನು ತೆಗೆದುಕೊಂಡು ಈಗಾಗಲೇ ನಿಗದಿ ಮಾಡಿರುವ ದಿನಾಂಕದವರೆಗೆ ಸದನವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಬೇಕು. ಸದನದಲ್ಲಿ ಅನೇಕ ಚರ್ಚೆಗಳು ಆಗಬೇಕಾಗಿವೆ. ಬರಗಾಲದ ಸಮಸ್ಯೆ ಇದೆ, ರೈತರಿಗೆ ಕಬ್ಬಿನ ಬಿಲ್ ಕೊಟ್ಟಿರುವುದಿಲ್ಲ, ಕುಡಿಯುವ ನೀರಿನ ಸಮಸ್ಯೆ ಇದೆ. ಎಷ್ಟೊ ಸಾರ್ವಜನಿಕ ಮಹತ್ವದ ವಿಧೇಯಕಗಳ ಚರ್ಚೆ ಆಗಬೇಕಾಗಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಗೃಹ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದು ಇದನ್ನು ಇವತ್ತೆ ಅಂತ್ಯಗೊಳಿಸಿ, ಈ ಅಧಿವೇಶನವನ್ನು ದುರುದ್ದೇಶದಿಂದ ಮುಂದಕ್ಕೆ ಹಾಕುವಂತಹ ಯಾವುದೆ ಸಂಚು ಮಾಡದೆ, 30ನೇ ತಾರೀಖಿನವರೆಗೆ ನಡೆಸಿ, ಅನೇಕ ವಿಚಾರಗಳನ್ನು ನಾವು ಇಲ್ಲಿ ಚರ್ಚೆ ಮಾಡಬೇಕಾಗಿದೆ. ಹೊಸ ಶಾಸಕರಾಗಿ ಆಯ್ಕೆಯಾಗಿ ಬಂದ ನಮಗೆ ಮಾತನಾಡಬೇಕು ಎನ್ನುವ ಒಂದು ಭಾವನೆ ಇದೆ. ಜನರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬೇಕು ಎನ್ನುವ ಉದ್ದೇಶದಿಂದ ನಾವು ಇಲ್ಲಿ ಬಂದಿದೆ. ಪ್ರತಿ ಅಧಿವೇಶನದಲ್ಲಿಯು ಈ ರೀತಿ ಅಹೋರಾತ್ರಿ ಧರಣಿ ಸತ್ಯಾಗ್ರಹವನ್ನು ಮಾಡುವುದು ಇದರಿಂದ ಮೇಲ್ಮನೆಯ ಪಾವಿತ್ರ್ಯತೆಯೇ ಇಂದು ಹಾಳಾಗಿ ಹೋಗುತ್ತಿದೆ.

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು)**:– ಪಾರ್ಲಿಮೆಂಟ್‌ನಲ್ಲಿ ಯಾವ ರೀತಿ ನಡವಳಿಕೆ ಆಗುತ್ತದೆ ಎನ್ನುವುದನ್ನು ಸ್ವಲ್ಪ ಹೇಳಿ.

**ಶ್ರೀ ಬಸನಗೌಡ ಆರ್. ಪಾಟೀಲ್ ಯತ್ನಾಳ್**:– ಸರ್ ತಾವು ಪಾರ್ಲಿಮೆಂಟ್ ಸದಸ್ಯರಾಗಿ ಕೆಲಸ ಮಾಡಿ ಬಂದವರು.

**ಸಭಾಪತಿಯವರು**:– ಯಾರು ಮಧ್ಯೆ ಬಾಯಿ ಹಾಕುವುದು ಬೇಡ. ಸಚವರೆ ಆ ವಿಚಾರ ಬೇಡ ಈಗ. ನೀವು– ನೀವೆ ಮಾತನಾಡಬೇಡಿ. ಏನೇ ಮಾತನಾಡಬೇಕಾದರೂ ನನ್ನ ಮೂಲಕ ಮಾತನಾಡಿ. ನನ್ನ ಒಪ್ಪಿಗೆ ತೆಗೆದುಕೊಂಡು ಮಾತನಾಡಿ. ಯತ್ನಾಳರವರೆ ನಿಮ್ಮ ಮಾತುಗಳನ್ನು ಬೇಗ ಮುಗಿಸಿ.

**ಶ್ರೀ ಬಸನಗೌಡ ಆರ್. ಪಾಟೀಲ್ ಯತ್ನಾಳ್**:– ಮಾನ್ಯ ಸಭಾಪತಿಗಳೆ, ಸರ್ಕಾರ ತನ್ನ ಮೊಂಡುವಾದವನ್ನು ಮುಂದುವರೆಸಿಕೊಂಡು ಹೋಗಬಾರದು. ಇಡೀ ರಾಜ್ಯದ 98%ರಷ್ಟು ಜನ ಇವತ್ತು ರಾಜೀನಾಮೆ ಕೊಡಬೇಕು ಎನ್ನುವ ಒಲವನ್ನು ಹೊಂದಿದ್ದಾರೆ. ಇಂತಹ ಸಂದರ್ಭದಲ್ಲಿ ಆಡಳಿತ ಪಕ್ಷ ಜನರ ಭಾವನೆಗಳಿಗೆ ತಲೆ ಬಾಗಿ ಆ ಇಬ್ಬರು ಅಧಿಕಾರಿಗಳ ಮತ್ತು ಮಾನ್ಯ ಜಾರ್ಜ್‌ರವರ ರಾಜೀನಾಮೆಯನ್ನು ತೆಗೆದುಕೊಂಡು ಈ ವಿಷಯಕ್ಕೆ ಅಂತ್ಯ ಹಾಡಬೇಕು. ವಿರೋಧ ಪಕ್ಷಗಳವರಿಗೂ ನಾನು ವಿನಂತಿ ಮಾಡಿಕೊಳ್ಳುವುದು, ಪ್ರತಿ ಅಧಿವೇಶನದಲ್ಲಿಯು ಅಹೋರಾತ್ರಿ ಧರಣಿ ಮಾಡಿದರೆ ಹೊಸದಾಗಿ ಬಂದ ನಮಗೆ ಇಲ್ಲಿ ಏನು ಚರ್ಚೆ ಮಾಡಲು ಅವಕಾಶವೆ ಇಲ್ಲದ ಹಾಗೆ ಆಗುತ್ತದೆ. ಆದ್ದರಿಂದ ಆಡಳಿತ ಪಕ್ಷಕೆ ಮತ್ತು ವಿರೋಧ ಪಕ್ಷದವರಿಗೆ ನಾನು ವಿನಂತಿ ಮಾಡಿಕೊಳ್ಳುವುದು, ಆದಷ್ಟು ಬೇಗ ಇತ್ಯರ್ಥಗೊಳಿಸಿ ಸದನ ನಡೆಸಲು ಅವಕಾಶ ಮಾಡಿಕೊಡಬೇಕು ಮತ್ತು ನಮಗೆ ಇಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ವಿನಂತಿಸಿಕೊಳ್ಳುತ್ತನೆ.

**ಶ್ರೀ ಬಸವರಾಜ ಹೊರಟ್ಟಿ(ಶಿಕ್ಷಕರ ಕ್ಷೇತ್ರ)**:– ಮಾನ್ಯ ಸಭಾಪತಿಗಳೆ, ಮಾನ್ಯ ಯತ್ನಾಳರವರು ಹೇಳಿದಂತೆಯೇ ರಾಜ್ಯದ ಜನರು ಹೇಳುತ್ತಿದ್ದಾರೆ. ದಯಮಾಡಿ ಸರ್ಕಾರ ವಿಚಾರ ಮಾಡಬೇಕು, ಒಬ್ಬ ಮಂತ್ರಿ ರಾಜೀನಾಮೆ ಕೊಟ್ಟರೆ ಏನು ದೊಡ್ಡದಾಗಿ ಹಾನಿಯಾಗುತ್ತದೆ? ಸುಮ್ಮನೆ ಇದನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡು ಇಡೀ ರಾಜ್ಯಕ್ಕೆ ತೊಂದರೆ ಆಗುವಂತೆ ಮಾಡಲಾಗುತ್ತಿದೆ. ಇದು ಸರಿಯೊ ತಪ್ಪೊ ಆ ವಿಚಾರ ಈಗ ಬೇಡ. ರಾಜೀನಾಮೆ ಕೊಡುವುದರಿಂದ ಸರ್ಕಾರದ ಘನತೆ ಹೆಚ್ಚಾಗುತ್ತದೆಯೇ ಅಥವಾ ಕಡಿಮೆಯಾಗುತ್ತದೆಯೇ? ಪರಮೇಶ್ವರವರನ್ನು ಮುಖ್ಯಮಂತ್ರಿಯಾಗಿಯು ಮಾಡಲಿಲ್ಲ, ಉಪ ಮುಖ್ಯಮಂತ್ರಿಯಾಗಿಯು ಮಾಡಲಿಲ್ಲ. ಏಕೆ ಸುಮ್ಮನೆ ಇದನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳುತ್ತಿದ್ದಿರಿ. ಒಂದು ಪ್ರಶ್ನೆಯನ್ನು ತರಬೇಕಾದರೆ 40,000 ರಿಂದ 50,000 ರೂ.ಗಳ ಖರ್ಚಾಗುತ್ತದೆ ಎಂದು ಮೊನ್ನೆ ಸರ್ಕಾರವೆ ಹೇಳಿದೆ. ಜನರು ನಮಗೂ ಬೈಯುತ್ತಾರೆ, ನಿಮಗೂ ಬೈಯುತ್ತಾರೆ. ದಯಮಾಡಿ ಸರ್ಕಾರ ಒಂದು ತೀರ್ಮಾನಕ್ಕೆ ಬರಬೇಕು. ರಾಜೀನಾಮೆ ಕೊಡುವುದು ಏನು ದೊಡ್ಡ ವಿಚಾರವಲ್ಲ. ಸಭಾನಾಯಕರೆ ನೀವೆ ಅಧ್ಯಕ್ಷರೂ ನಿಮ್ಮ ಕೈಯಲ್ಲಿ ಅಧಿಕಾರವಿದೆ ಸರ್ಕಾರಕ್ಕೆ ನಿರ್ದೇಶನ ಕೊಡಿ, ನಾವು ಇಲ್ಲಿ ಸುಮ್ಮನೆ ಮಾತನಾಡುವುದಿಲ್ಲ. ಜನರ ಭಾವನೆಗಳನ್ನು ಇಲ್ಲಿ ಹೇಳುತ್ತೇವೆ. ಇಲ್ಲಿ ಸರ್ಕಾರದ ಜವಾಬ್ದಾರಿಯು ಇದೆ. ಮನೆ ಯಜಮಾನ ಇದ್ದ ಹಾಗೆ ಉಳಿದವರು ಇರುವುದಿಲ್ಲ. ಸಭಾನಾಯಕರು ಮನೆ ಯಜಮಾನ ಇದ್ದ ಹಾಗೆ. ದಯಮಾಡಿ ವಿಚಾರ ಮಾಡಿ. ಒಬ್ಬರ ರಾಜೀನಾಮೆ ತೆಗೆದುಕೊಳ್ಳುವುದರಿಂದ ಏನಾಗುತ್ತದೆ? ಸಂತೋಷ ಲಾಡರವರ ರಾಜೀನಾಮೆಯನ್ನು ತೆಗೆದುಕೊಳ್ಳಲಾಯಿತು. ಆಗ ನಾವು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದೆವೆ. ನಂತರ ಅವರನ್ನು ಕ್ಯಾಬಿನೆಟ್ ಮಂತ್ರಿಯಾಗಿ ತೆಗೆದುಕೊಂಡಿದ್ದೀರಿ. ಸರ್ಕಾರ ಒಳ್ಳೆಯ ಹೆಸರನ್ನು ತೆಗೆದುಕೊಳ್ಳಲು ಏಕೆ ಒಪ್ಪುತ್ತಿಲ್ಲ? ನಿಮಗೆ ಏನೋ ಆಗಿದೆ, ನಿಮ್ಮ ಯಾರ ತಲೆಯು ಸರಿ ಇಲ್ಲ. ತಕ್ಷಣ ಒಂದು ತೀರ್ಮಾನಕ್ಕೆ ಬನ್ನಿ. ಸದನದಲ್ಲಿ ಈ ರೀತಿ ನಡೆಯುತ್ತಿರುವುದನ್ನು ನೋಡಿದರೆ ಪ್ರಮಾಣ ಮಾಡಿ ಹೇಳುತ್ತೇನೆ, ನನಗೆ ತುಂಬಾ ನೋವಾಗುತ್ತದೆ. ನನಗೆ ತುಂಬಾ ಬೇಸರವಾಗಿದೆ. ಇದನ್ನು ನೋಡಿ ಇಡೀ ರಾಜ್ಯದ ಜನರು ಬಾಯಿಗೆ ಬಂದಹಾಗೆ ಬೈಯುತ್ತಾರೆ. ತೆರಿಗೆ ಕೊಡುವವರು ನಾವು, ನೀವು ಏನು ಮಾಡುತ್ತೀರಿ ಎಂದು ಕೇಳುತ್ತಾರೆ. ಅದಕ್ಕಾಗಿ ಇನ್ನೊಂದು ಸಾರಿ ಸಭೆ ಕರೆಯಿರಿ ಚರ್ಚೆ ಮಾಡಿ ಒಂದು ತೀರ್ಮಾನ ಮಾಡಿ ರಾಜ್ಯದ ಜನರಿಗೆ ಒಂದು ಒಳ್ಳೆಯ ಮೆಸೇಜ್ ಹೋಗುವಂತೆ ಮಾಡಬೇಕೆಂದು ಕಳಕಳಿಯಿಂದ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳನ್ನು ಕರೆಯಿರಿ ಎಲ್ಲರೂ ಒಂದು ತೀರ್ಮಾನಕ್ಕೆ ಬಂದರೆ ಒಳ್ಳೆಯದಾಗುತ್ತದೆ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ.

**ಡಾ: ಜಿ.ಪರಮೇಶ್ವರ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಇಡೀ ರಾಜ್ಯದಲ್ಲಿ ಈ ಘಟನೆಯಲ್ಲಿಯ ಸತ್ಯ ಹೊರಗಡೆ ಬರಬೇಕು ಎಂದು ಜನರು ಮತ್ತು ನಾವೆಲ್ಲರೂ ಅಪೇಕ್ಷೆ ಪಡುತ್ತೇವೆ. ಸರ್ಕಾರ ಬಹಳ ಸೂಕ್ಷ್ಮವಾಗಿದೆ ಎನ್ನುವುದನ್ನು ಮತ್ತೊಮ್ಮೆ ಉಚ್ಚಾರ ಮಾಡಲು ಬಯಸುತ್ತೇನೆ. ನಾವ್ಯಾರು ದಪ್ಪ ಚರ್ಮದವರಲ್ಲ, ಸರ್ಕಾರ ದಪ್ಪ ಚರ್ಮ ಹೊಂದಿರುವುದಿಲ್ಲ. We are very sensitive people who are in the power. ಸತ್ಯ ಹೊರಗೆ ಬರಬೇಕು. ಮಾನ್ಯ ಜಾರ್ಜ್‌ರವರ ವಿಚಾರದಲ್ಲಿ ಏನಾದರು ಒಂದು ಅಂಶ ಗಣಪತಿಯವರ ಆತ್ಮಹತ್ಯೆಗೆ ಸಂಬಂಧವಿದೆ ಎಂದು ಹೇಳಿದರೆ ಖಂಡಿತವಾಗಿ ತಾವು ಹೇಳುವುದನ್ನು ನಾನು ಒಪ್ಪುತ್ತೇನೆ. ಆದರೆ ಸತ್ಯ ಹೊರಗಡೆ ಬರಬೇಕು. ಅವರು ಹೇಳಿಕೆ ಕೊಡುವಾಗ ನನ್ನ ಸಾವಿಗೆ ಈ ಮೂರು ಜನರು ಕಾರಣ ಎಂದು ಹೇಳಿದ್ದರೆ ಖಂಡಿತವಾಗಿಯು ತಾವು ಹೇಳುವುದನ್ನು ನಾವು ಪರಿಶೀಲನೆ ಮಾಡಬಹುದು. ಆದರೆ ಅವರು ಆ ರೀತಿ ಹೇಳಿರುವುದಿಲ್ಲ. Circumstantial ಏನು ಹೇಳಿಕೆ ಬಂದಿದೆ, ಅದನ್ನು ಪರಿಶೀಲನೆ ಮಾಡಬೇಕು, ತನಿಖೆ ಮಾಡಬೇಕು. ಅದರ ಹಿಂದೆ–ಮುಂದೆ ಇರುವ ಅನೇಕ ವಿಚಾರಗಳನ್ನು ಕೂಡಾ ಪರಿಶೀಲನೆ ಮಾಡಬೇಕಾಗುತ್ತದೆ. ಸುಮ್ಮನೆ ಅವರು ಹೇಳಿದರು ಎಂದು... ರಾಜೀನಾಮೆ ಕೊಡುವುದು ಏನು ದೊಡ್ಡ ವಿಚಾರವಲ್ಲ. ನಮ್ಮ ಜಿಲ್ಲೆಯ ಒಂದು ಉದಾಹರಣೆಯನ್ನು ಹೇಳುತ್ತೇನೆ, ಮಾನ್ಯ ರಾಮರಾಯರು ನಮ್ಮ ತುಮಕೂರು ಜಿಲ್ಲೆಯವರು ಅವರ ಬಗ್ಗೆ ನನಗೆ ತುಂಬಾ ಹೆಮ್ಮೆ ಇದೆ. ಇವರು ಗೃಹ ಸಚಿವರಾಗಿದ್ದ ಸಂದರ್ಭದಲ್ಲಿ ಮಧಗಿರಿಯಲ್ಲಿ ರೈತರ ಮೇಲೆ, ಹೆಣ್ಣುಮಕ್ಕಳ ಮೇಲೆ ಲಾಠಿ ಚಾರ್ಜ್, ಫೈರಿಂಗ್ ಮಾಡಲಾಯಿತು. ಈ ವಿಚಾರವಾಗಿ ವಿರೋಧ ಪಕ್ಷದ ನಾಯಕರು ಕೇಳಿದ ತಕ್ಷಣ ಮಾನ್ಯ ರಾಮರಾಯರು ಅದರ ಜವಾಬ್ದಾರಿಯನ್ನು ಹೊತ್ತು ನಾನು ರಾಜೀನಾಮೆಯನ್ನು ಕೊಡುತ್ತೇನೆ ಎಂದು ಹೇಳಿ ರಾಜೀನಾಮೆ ಕೊಟ್ಟು ಹೊರಗೆ ಹೋಗಿರುವಂತಹ ಇತಿಹಾಸ ಇದೆ. ನೇರವಾಗಿ ಹೊಣೆ ಇದ್ದರೆ ಖಂಡಿತವಾಗಿ ನಾನು ಒಪ್ಪುತ್ತೇನೆ. ಆದರೆ ಯಾವುದೆ ರೀತಿಯ ಸಂಬಂಧವಿಲ್ಲದೆ ಹೇಗೆ ರಾಜೀನಾಮೆ ಕೊಡಿ ಎಂದು ಕೇಳಲು ಆಗುತ್ತದೆ? ತೆರಿಗೆ ಮೂಲಕ ಜನರು ಹಣ ಕೊಡುತ್ತಾರೆ, ಅವರ ಹಣವನ್ನು ನಾವು ಖರ್ಚು ಮಾಡುತ್ತಿದ್ದವೆ, ಇದರಿಂದ ಜನ ನಮ್ಮನ್ನು ಬೈಯುತ್ತಿದ್ದಾರೆ ಎಂದು ಮಾನ್ಯ ಹೊರಟ್ಟಿಯವರು ಹೇಳಿದರು. ನಾವು ಸದನಕ್ಕೆ ಬಂದಾಗ ರಾಜ್ಯದ ಜನರಿಗೆ ಸ್ವಲ್ಪ ಒಳ್ಳೆಯದಾಗುವ ರೀತಿಯಲ್ಲಿ ನಡೆದುಕೊಳ್ಳಲು ಸರ್ಕಾರಕ್ಕೆ ತಾವು ಸಲಹೆ–ಸೂಚನೆಗಳನ್ನು ಕೊಡಬಹುದು ಮತ್ತು ಬೇರೆ ರೀತಿಯಲ್ಲಿ ಟೀಕೆ–ಟಿಪ್ಪಣಿಗಳು ಕೂಡಾ ತಾವು ಮಾಡಬಹುದು. ಜನರು ಏನು ಅಪೇಕ್ಷೆ ಪಡುತ್ತಾರೆ ಎನ್ನುವುದನ್ನು ತಾವು ಯೋಚನೆ ಮಾಡಬಹುದು. ಈ ಸಾವಿನಲ್ಲಿರುವ ಸತ್ಯಾಸತ್ಯತೆ ಹೊರಗೆ ಬರಬೇಕು ಎಂದು ಜನರು ಅಪೇಕ್ಷೆ ಪಡುತ್ತಿದ್ದಾರೆ. ಇನ್ನೊಂದು ಕಡೆ ರಾಜ್ಯದ ಅಭಿವೃದ್ಧಿಯಾಗಬೇಕು. ಅನೇಕ ಪ್ರಗತಿಪರ ಯೋಜನೆಗಳನ್ನು ಸರ್ಕಾರ ತೆಗೆದುಕೊಂಡು ಬಂದಿದೆ. ಬಡವರಿಗೆ ಅನುಕೂಲವಾಗುವಂತಹ, ರಾಜ್ಯಕ್ಕೆ ಅನುಕೂಲವಾಗುವಂತ, infrastructure ಆಗಬೇಕು. ಇವತ್ತು ಬೆಂಗಳೂರಿನಲ್ಲಿಯ ಟ್ರಾಫಿಕ್ ಬಗ್ಗೆ ಎಲ್ಲರಿಗೂ ಅನುಭವವಿದೆ. ಆ infrastructure ಆಗಬೇಕು. ಬೆಂಗಳೂರು ಇವತ್ತು ಬಹಳ ವೇಗವಾಗಿ ಬೆಳೆಯುತ್ತಿದೆ. Karnataka is one of the economically progressive States in the Country. ಅದನ್ನು ನಾವು ದೊಡ್ಡ ಪ್ರಮಾಣಕ್ಕೆ ತೆಗೆದುಕೊಂಡು ಹೋಗಬೇಕು ಎನ್ನುವ ಆಶೋತ್ತರಗಳು ಇರುವಾಗ ಜನ ಕೂಡಾ ಅದನ್ನು ಅಪೇಕ್ಷೆಪಡುತ್ತಾರೆ. ಕರ್ನಾಟಕದಲ್ಲಿ ಇನ್ನು 30% ಜನರು ಬಡತನದ ರೇಖೆಗಿಂತ ಕೆಳಗೆ ಇದ್ದಾರೆ. ಅವರ ಬಗ್ಗೆ ನಾವು ಏನಾದರೂ ಯೋಚನೆ ಮಾಡಬೇಕು. ಇಂತಹ ವಿಚಾರಗಳನ್ನು ತಾವು ಚರ್ಚೆ ಮಾಡಿ, ಸಲಹೆ ಕೊಡಿ, ಟೀಕೆ ಮಾಡಿ ನಮ್ಮನ್ನು ತಿದ್ದಿ ಈ ರೀತಿ ಮಾಡಿ ಎಂದು ಹೇಳಿ. ಆದರೆ ಇದೊಂದು ವಿಷಯವನ್ನು ತೆಗೆದುಕೊಂಡು ಇದರಲ್ಲಿ ರಾಜಕಾರಣ ಮಾಡುವುದು ಸರಿಯಲ್ಲ. ಮಾಡಬಾರದು. ತಾವು ಕೇಳುವುದಕ್ಕೆ, ಒತ್ತಾಯ ಮಾಡುವುದಕ್ಕೆ ನಮ್ಮ ಯಾವ ತಕರಾರು ಇಲ್ಲ. ತಾವು ರಾಜೀನಾಮೆ ಕೇಳುತ್ತಿರುವುದಕ್ಕೂ ನಮ್ಮ ಅಭ್ಯಂತರವಿಲ್ಲ. ಆದರೆ ಅದನ್ನು ನಾವು ಸಿಐಡಿಗೆ ಕೊಟ್ಟಿರುವುದನ್ನು ಬದಲಾವಣೆ ಮಾಡಿ, Judicial Enquiry ಆಗಬೇಕು ಎಂದು ಈಗಾಗಲೇ ಅದರ ಬಗ್ಗೆ ಪ್ರಕ್ರಿಯೆ ಪ್ರಾರಂಭ ಮಾಡಿದ್ದೇವೆ. Chief Justice ರವರಿಗೆ ಮಾನ್ಯ ಮುಖ್ಯಮಂತ್ರಿಗಳು ಕಾಗದ ಬರೆದು ತಿಳಿಸಿದ್ದಾರೆ. ಅವರು ಹೆಸರುಗಳನ್ನು ಸಲಹೆ ಮಾಡಿದ್ದಾರೆ. ಈ ಪ್ರಕ್ರಿಯೆ ಪ್ರಾರಂಭವಾಗಿದ್ದು, ಸತ್ಯ ಹೊರಗಡೆ ಬರಲಿ, ಆನಂತರ ಅವರೇ ಕೇಳಬಹುದು. ಆದ್ದರಿಂದ ನಾನು ಉತ್ತರ ಕೊಡುತ್ತೇನೆ ಮತ್ತು ಬಹಳಷ್ಟು ಪ್ರಶ್ನೆಗಳನ್ನು ಕೇಳಿದ್ದಾರೆ ಎಂದು

ಹೇಳಿದರೂ ಅವಕಾಶ ಮಾಡಿಕೊಡುತ್ತಿಲ್ಲ. ಸರ್ಕಾರದ ಅನೇಕ ವಿಚಾರಗಳನ್ನು ನಡೆಸಬೇಕಾಗಿರುವುದರಿಂದ ಅವಕಾಶ ಕೊಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು ವಿಚಾರವನ್ನು ಹೇಳಿದ ನಂತರ ತಾವು ತೀರ್ಮಾನ ತೆಗೆದುಕೊಳ್ಳಿ. ಇವತ್ತು ಬಹಳ ಸ್ಪಷ್ಟವಾಗಿ ಗಣಪತಿ ಆತ್ಮಹತ್ಯೆ ಮಾಡಿಕೊಂಡ ಸಂದರ್ಭದಲ್ಲಿ ಟಿ.ವಿ ಸಂದರ್ಶನ ಕೊಟ್ಟ ಕ್ಯಾಸೆಟ್ ಅನ್ನು ಮಾನ್ಯ ಸಭಾಪತಿಯವರಿಗೆ ಕೊಡಲಾಗಿದೆ. ದಯವಿಟ್ಟು ಇದನ್ನು ಬಹಳ ಎಳೆಯುವುದು ಬೇಡ. ಇಡೀ ಸದನಕ್ಕೆ ಪತ್ರಕರ್ತರ ಮುಂದೆ ಸಿ.ಡಿ ಯನ್ನು ತೋರಿಸಲಿ. ಅದರಲ್ಲಿ ಗಣಪತಿಯವರು ಜಾರ್ಜ್‌ರವರ ಹೆಸರನ್ನು ಹೇಳಿಲ್ಲ ಎಂದರೆ ಇವತ್ತೇ ಧರಣಿಯನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ.

**ಡಾ: ಜಿ. ಪರಮೇಶ್ವರ್:–** ಹೆಸರನ್ನು ಹೇಳಿಲ್ಲ ಎಂದು ನಾವು ಹೇಳುತ್ತಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮತ್ತೆ ಮತ್ತೆ ನಾನು ಇದರ ಬಗ್ಗೆ ಚರ್ಚೆ ಮಾಡುವುದಿಲ್ಲ. ಇಡೀ ಕರ್ನಾಟಕದ ರಾಜ್ಯದ ಜನ ನೋಡುತ್ತಿರುವ ಸಂದರ್ಭದಲ್ಲಿ ನಾನು ಒಪ್ಪಿಕೊಳ್ಳುತ್ತೇನೆ. ಸಿ.ಡಿ ಯನ್ನು ತೋರಿಸಿ, ಅದರಲ್ಲಿ ಜಾರ್ಜ್ ಬಗ್ಗೆ ದಿ: ಗಣಪತಿಯವರು ಹೇಳಿಲ್ಲ ಎಂದರೆ ನಾವು ಈ ಹೊತ್ತಿನವರೆಗೂ ಹೋರಾಟ ಮಾಡಿದ್ದು, ರಾಜ್ಯದ ಜನತೆಯ ಮುಂದೆ ಸದನದ ಸಮಯವನ್ನು ನಾವು ಹಾಳು ಮಾಡಿದ್ದೇವೆ, ಕ್ಷಮಿಸಿ ಎಂದು ಕೇಳುತ್ತೇವೆ. ಇಲ್ಲದಿದ್ದರೆ ಅವರು ಜಾರ್ಜ್ ರಾಜೀನಾಮೆ ತೆಗೆದುಕೊಳ್ಳಲು ತಯಾರಿದ್ದಾರೆಯೇ? ಇವೆರಡರಲ್ಲಿ ಒಂದು ಆಗಲಿ, ಸುಮ್ಮನೆ ಎಳೆದುಕೊಂಡು ಹೋಗುವುದು ಬೇಡ. ಅವರ ಬಳಿಯೂ ಸಿ.ಡಿ ಇದೆ. ನಾವು ಹೊಸದನ್ನು ಹೇಳುತ್ತಿಲ್ಲ. ಸಿ.ಡಿ ತೋರಿಸಲು ಒಪ್ಪಿಕೊಳ್ಳುವುದಕ್ಕೆ ಏನು ತೊಂದರೆ?

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಹಿಂದೆ ಗೃಹ ಮಂತ್ರಿಯಾಗಿದ್ದ ಶ್ರೀಯುತ ರಾಮರಾಯರು ಪೊಲೀಸ್ ಲಾಠಿ ಚಾರ್ಜ್ ಆಗಿದ್ದಾಗ ರಾಜೀನಾಮೆ ನೀಡಿದ ಪ್ರಸಂಗವನ್ನು ಪ್ರಸ್ತಾಪ ಮಾಡಿದರು. ಪೊಲೀಸ್ ಲಾಠಿ ಚಾರ್ಜ್‌ಗೂ ಗೃಹ ಸಚಿವರಿಗೂ ಏನು ಸಂಬಂಧ? ಯಾರೋ ಒಬ್ಬ ಪೊಲೀಸ್ ಲಾಠಿ ಚಾರ್ಜ್ ಮಾಡಿದ್ದಕ್ಕೆ ಟಠಡಿಚಿಟ ಡಿಥಿಶಠಿಠಛುಬುಟುಣಥಿ ತೆಗೆದುಕೊಂಡು ರಾಜೀನಾಮೆ ಕೊಟ್ಟರು. ಅವರಿಗೂ ಏನೂ ಸಂಬಂಧ ಇಲ್ಲ. ಇವತ್ತು ಜಾರ್ಜ್ ಹೆಸರು ಟಿ.ವಿ ಯಲ್ಲಿ ಬಂದಿದೆ. ಗಣಪತಿಯವರು ಹೇಳಿದ್ದಾರೆ. ಹಿಂದಿನ ಗೃಹ ಸಚಿವರಾದ ಜಾರ್ಜ್‌ರವರು ಕಾರಣ ಎಂದು ಹೇಳಿದ್ದಾರೆ. ಅವರ ಹೆಸರು ಬಂದಿರುವುದರಿಂದ ಜಾರ್ಜ್‌ರವರೇ ಸ್ವತ: ರಾಜೀನಾಮೆ ಕೊಡಲಿ. ಇದರಲ್ಲಿ ತಪ್ಪೇನಿದೆ? ರಾಮರಾಯರ ಬಗ್ಗೆ ಹೇಳಿದರು. ಹಾಗೆ ಗಣಪತಿಯವರು ಇಬ್ಬರು ಅಧಿಕಾರಿಗಳು ಹಾಗೂ ಹಿಂದಿನ ಗೃಹ ಸಚಿವರ ಬಗ್ಗೆ ಹೇಳಿದ್ದು, ಅವರ ಹೆಸರು ಬಂದಿರುವುದರಿಂದ ಕಳಂಕ ಬೇಡ ಎಂದು ರಾಜೀನಾಮೆ ಕೊಡಲಿ. ಮಾನ್ಯ ಸಭಾನಾಯಕರು ಆತ್ಮದಲ್ಲಿ ರಾಜೀನಾಮೆ ಕೊಡಬೇಕೆಂದು ಇದ್ದರೂ ಅದನ್ನು ಹೊರಗೆ ಹೇಳಬೇಕು. ಅದನ್ನು ಅವರು ಹೇಳುವುದಿಲ್ಲ, ಅದು ಅನಿವಾರ್ಯ.

**ಶ್ರೀ ಕೆ.ಬಿ. ಶಾಣಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಬಹಳ ಜನ ಭಯಂಕರ ಎನ್ನುವಂತೆ ಮಾಡಿದ್ದಾರೆ, ನಾನೂ ಇದನ್ನು ಕೇಳುತ್ತಿದ್ದೇನೆ. I never participated in the deliberation also. ಸರ್ಕಾರದಲ್ಲಿ ಗೃಹ ಸಚಿವರಾಗಿ ಕೆಲಸ ಮಾಡಿದವರ ಹೆಸರನ್ನು ಹೇಳಿರುವ ಬಗ್ಗೆ ರಾಜ್ಯ ಮತ್ತು ದೇಶದ ಜನರು ನೋಡಿದ್ದಾರೆ. ನಾನು ರಾಜಕಾರಣದ ಬಗ್ಗೆ ಮಾತನಾಡುವುದಿಲ್ಲ. The fact I am going to highlight before this House is everybody knows that.. ಈ ಮೂವ್ವರ ಹೆಸರನ್ನು ಹೇಳಿ, ಏನಾದರೂ ಆದರೆ ಅವರೇ ಜವಾಬ್ದಾರರು ಎಂದು ಹೇಳಿರುವುದನ್ನು ಎಲ್ಲರೂ ನೋಡಿದ್ದಾರೆ. ಈ ಇಷ್ಯೂ ಆಯಿತು. ಈ ಸದನದಲ್ಲಿ ನಾನು ವಿಪಕ್ಷ ಸದಸ್ಯನಾಗಿ ಕೆಲವು ವಿಚಾರಗಳ ಬಗ್ಗೆ ತಮಗೆ ಕೇಳಬಯಸುತ್ತೇನೆ. ಈ ಪ್ರಕಾರ ನಡೆದಿರುವುದರಿಂದ, if he is not involved in this episode, let this matter taken into the Cabinet. ನಿನ್ನೆ ನಾನು ವೈಯಕ್ತಿಕವಾಗಿ ಅವರಿಗೆ ಮನವಿ ಮಾಡಿದೆ. ಈ ಸರ್ಕಾರದ ಹೆಸರು ಬಹಳ ಕೆಡುತ್ತಿದೆ, ಮಾನ್ಯ ಮುಖ್ಯ ಮಂತ್ರಿಗಳ ಹಾಗೂ ಪಕ್ಷದ ಹೆಸರು ಕೆಡಬಾರದು. Volunteer ಆಗಿ ಅವರೇ ರಾಜೀನಾಮೆ ಕೊಟ್ಟರೆ ಇದೆಲ್ಲವೂ ಹೋಗುತ್ತದೆ ಎಂದು ಸ್ನೇಹಿತನಾಗಿ ಅವರಿಗೆ ಹೇಳಿದೆ. For that he said; 'why should I give?' I told him that; because that officer has taken your name

therefore you have to tender your resignation. Why should he taken his name. That is the whole crux of the discussion here.

ಇನ್ನು ಎರಡನೆಯದಾಗಿ ಸದನವು ನಡೆಯದೇ ನಾವು ಎಷ್ಟು ಸಾರಿ ಹಾಗೆ ಮನೆಗೆ ಹೋಗಬೇಕು? ಹೋದ ಸಾರಿ ಮತ್ತು ಅದಕ್ಕಿಂತಲೂ ಹಿಂದಿನ ಸದನವೂ ಇದೇ ರೀತಿ ಆಯಿತು. ಈ ರಾಜ್ಯದ ಜನ ಪ್ರಜಾತಂತ್ರ ವ್ಯವಸ್ಥೆಯ ಈ ವೇದಿಕೆ ಬಗ್ಗೆ ಏನು ತಿಳಿಯಬೇಕು? How far we have tolerated? As a member of this House, I also represented five times on the floor of this House, here, there and in Rajya Sabha. With due respect to Chair I am submitting. ನಮ್ಮನ್ನು ಹೊರಗೆ ಹಾಕಿಯಾದರೂ ಸದನವನ್ನು ನಡೆಸಬೇಕು ಎನ್ನುವಂತಾಗಿದೆ. ನಾನು ಬಹಳ ತಾಳ್ಮೆ ವಹಿಸುತ್ತಿದ್ದೇನೆ. ಯಾರಿಗಾದರೂ ತಾವು ಬುದ್ಧಿ ಮಾತನ್ನು ಹೇಳಿ. ಏಕೆಂದರೆ ಇದನ್ನು ನಾವು ಕೇಳುವಂತಹ ವಿಚಾರವಾಗಿದ್ದು, ನಮಗಿರುವ ಹಕ್ಕನ್ನು ಅವರು ಮೊಟಕು ಮಾಡುತ್ತಿದ್ದಾರೆ. You kindly tell them that it is not correct. 1985ರಲ್ಲಿ ಒಂದು ಸಾರಿ ಮಾನ್ಯ ಚಂದ್ರೇಗೌಡರು ನಮ್ಮ ಸದಸ್ಯರೆಲ್ಲರನ್ನೂ ಹೊರಗೆ ಹಾಕಿ ಸದನವನ್ನು ನಡೆಸಿದರು. ಆ ಪರಮೋಚ್ಚ ಅಧಿಕಾರಿ ತಮಗೆ ಇದ್ದು, ಈ ಸದನವನ್ನು ನಡೆಸುವಂತೆ ಮಾಡಿ. ಹೋದ ಸಾರಿ 9 ದಿನ ಹಾಗೂ ಅದಕ್ಕೂ ಮುಂಚೆ 15 ದಿನ ಹೋಯಿತು. ಇಲ್ಲಿ ಬಜೆಟ್ ಪಾಸ್ ಆಗುತ್ತದೆ. ಎಲ್ಲವೂ without discussion ಪಾಸ್ ಆಗುತ್ತದೆ. Is it the way for this democratic institution? ಅನೇಕ ವಿಧೇಯಕಗಳನ್ನು ಪಾಸ್ ಮಾಡಿಕೊಳ್ಳುತ್ತಾರೆ, ಅದಕ್ಕೆ ಒಪ್ಪಿಗೆ ಇದೆಯೇ? Whose consent is behind this? Treasury Bench's consent ಮಾತ್ರ ಸಾಕೇ? ನಮ್ಮ ಒಪ್ಪಿಗೆ ಬೇಡವೇ? Kindly come to the conclusion. ಇವತ್ತು ಕೆಲವು ವಿಧೇಯಕಗಳನ್ನು ತೆಗೆದುಕೊಂಡು ಬಂದಿದ್ದಾರೆ. ನಮ್ಮನ್ನು ಇವತ್ತೇ ಮನೆಗೆ ಕಳುಹಿಸುತ್ತಾರೋ ಅಥವಾ ಸೋಮವಾರ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತಾರೋ ಗೊತ್ತಿಲ್ಲ. ದಯಮಾಡಿ accept our request. ಒಬ್ಬರನ್ನು ಮಂತ್ರಿಮಂಡಲದಿಂದ ತೆಗೆದು, ಸದನವನ್ನು ನಡೆಸಬೇಕು ಮತ್ತು ಸರ್ಕಾರವನ್ನು ಉಳಿಸಿಕೊಳ್ಳಬೇಕು. My dear Home Minister kindly see our House should function. ದಯಮಾಡಿ ಮಾನ್ಯ ಸಭಾನಾಯಕರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಯೋಚನೆ ಮಾಡಬೇಕು. ಒಬ್ಬ ವ್ಯಕ್ತಿ ಸಲುವಾಗಿ ಪ್ರಜಾತಂತ್ರ ವ್ಯವಸ್ಥೆಯನ್ನು ಹಾಳು ಮಾಡುವುದಕ್ಕೆ ಹೋಗಬಾರದು. ಆ ವ್ಯಕ್ತಿ ಪ್ರಮುಖನಾದರೆ ಅವರ ಪಕ್ಷದಲ್ಲಿ ಉಪಯೋಗ ಮಾಡಿಕೊಳ್ಳಲಿ. ಇವತ್ತು ಅವರ ಹೆಸರು ಕೆಡುತ್ತಿರುವುದರಿಂದ ಅವರ ರಾಜೀನಾಮೆಯನ್ನು ಪಡೆದು ಸದನ ನಡೆಯಲು ಅನುವು ಮಾಡಿಕೊಡಬೇಕೆಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಬಸವರಾಜ ಹೊರಟ್ಟಿ:– ಮಾನ್ಯ ಸಭಾಪತಿಯವರೇ, ಅವರು ತಮ್ಮನ್ನಾದರೂ ನೋಡಬೇಕು. ಏಕೆಂದರೆ ತಾವು ಕೊಡಗಿನ ಅಳಿಯರಾಗಿದ್ದು, ನಿಮ್ಮ ಸಲುವಾಗಿಯಾದರೂ ಮಾಡಬೇಕು. ತಾವು ಮಾವನ ಮನೆಗೆ ಹೋಗಬೇಕೆಂದರೆ ಹೇಗೆ ಹೋಗುತ್ತೀರಿ? ಈ ರೀತಿಯಾದರೆ ನೀವು ಹೇಗೆ ಕೊಡಗಿಗೆ ಹೋಗುತ್ತೀರಿ? ನಿಮ್ಮನಾದರೂ ನೋಡಿ ಮಾಡಲಿ.

ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಕಳೆದ 3 ತಿಂಗಳಿನ ಹಿಂದೆ ಹುಳಿಮಾವು ಠಾಣೆಯಲ್ಲಿ ಒಂದು ದೂರು ದಾಖಲಾಗಿದೆ. ಒಬ್ಬ ಅರುಣ್ ಕುಮಾರ್ ಎಂಬುವವನು ಒಂದು ಹುಡುಗಿಯನ್ನು ಪ್ರೀತಿಸುತ್ತಿದ್ದು, ಆ ಹುಡುಗಿಯ ಮಾವ ಆತನಿಗೆ ತೊಂದರೆ ಕೊಟ್ಟ ಎಂದು ಆತನೇ ವಿಡಿಯೋ ಮಾಡಿಕೊಂಡು ಫೇಸ್ ಬುಕ್‌ನಲ್ಲಿ ಹಾಕಿ, ನಂತರ ಸತ್ತುಹೋದ. ನಂತರ ಪೋಲೀಸ್‌ನವರು ವಿಡಿಯೋ ನೋಡಿಕೊಂಡು ಅವರ ಮಾವನ ಮೇಲೆ ಎಫ್‌ಐಆರ್ ಹಾಕಿ ಅವನನ್ನು ಒಳಗೆ ಹಾಕಿದರು. ಅಂದರೆ ಜನಸಾಮಾನ್ಯರಿಗೆ ಒಂದು ನ್ಯಾಯ, ಇವರಿಗೆ ಒಂದು ನ್ಯಾಯವೇ? ಅದು ವಿಡಿಯೋ!, ಇದು ವಿಡಿಯೋ!, ಅದು ಟಿವಿಯಲ್ಲಿ ಬಂದಿದೆ, ಇದೂ ಟಿವಿಯಲ್ಲಿ ಬಂದಿದೆ. ಇವೆರಡರಲ್ಲಿ ವ್ಯತ್ಯಾಸ ಏನಿದೆ? ಅವರು ಇನ್ನು ಮುಂದೆ ಹೊಸ ಕಾನೂನನ್ನು ರಾಜ್ಯದಲ್ಲಿ ಮಾಡಲಿ.

**(ಗೊಂದಲ)**

ಶ್ರೀ ಐವಾನ್ ಡಿ'ಸೋಜಾ:– ಮಾನ್ಯ ಸಭಾಪತಿಯವರೇ, House is not in order. ಹೇಗೆ ಚರ್ಚೆಗೆ ಅವಕಾಶ ಕೊಡುತ್ತೀರಿ? ಸದನ ತಹಬದಿಗೆ ಬಂದ ನಂತರ ಚರ್ಚೆಗೆ ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಗೃಹ ಮಂತ್ರಿಗಳು ಮಾತನಾಡುವಾಗ ಸದನ ತಹಬದಿಯಲ್ಲಿ ಇತ್ತೇ? ಮಾನ್ಯ ಪುಟ್ಟಣ್ಣನವರು ಮಾತನಾಡುವಾಗ ಸದನ ತಹಬದಿಯಲ್ಲಿಲ್ಲ. ಇದು ವ್ಯವಸ್ಥೆ. ಕಾಂಗ್ರೆಸ್‌ನವರಿಗೆ ಬೇಕಾದ್ದು ನ್ಯಾಯ.

**ಶ್ರೀ ಐವಾನ್ ಡಿ'ಸೋಜಾ:–** ಸದನ ತಹಬದಿಯಲ್ಲಿ ಇಲ್ಲದಿರುವಾಗ ಚರ್ಚೆ ಮಾಡಬೇಕೆಮದು ಯಾವ ನಿಯಮಾವಳಿಗಳಲ್ಲಿ ಇದೆ.

**ಶ್ರೀ ಬಸವರಾಜ ರಾಯರೆಡ್ಡಿ:–** ನಾನು ತಮ್ಮ ಮುಖಾಂತರ ಎಲ್ಲರಿಗೂ ಮನವಿ ಮಾಡುವುದೇನೆಂದರೆ, ಸದನ ನಡೆಸಲು ಅನುವು ಮಾಡಿಕೊಡಬೇಕು.

**ಶ್ರೀ ಪುಟ್ಟಣ್ಣ:–** 'ಪ್ರೇಯಸಿಯ ಸಂಬಂಧಿಕನ ಕಿರುಕುಳವನ್ನು ಭರಿಸಲಾಗದೇ ನೊಂದ ಯುವಕನೊಬ್ಬ ತನಗಾದ ಮಾನಸಿಕ ಹಾಗೂ ದೈಹಿಕ ಹಿಂಸೆ ಬಗ್ಗೆ ಸವಿಸ್ತಾರವಾದ ವಿಡಿಯೋ ಒಂದನ್ನು ಫೇಸ್‌ಬುಕ್ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿ, ಆನಂತರ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ವಿಲಕ್ಷಣ ಘಟನೆ' ಎಂದು ಪತ್ರಿಕೆಗಳಲ್ಲಿ ಬಂದಿದೆ. ಸನ್ಮಾನ್ಯ ಸಭಾಪತಿಯವರೇ, ಆ ಮೂಲಕ ಡೆತ್ ನೋಟ್‌ಗೆ ಹೊಸ ಭಾಷ್ಯ ಬರೆದಿರುವ ಬಿ.ಜಿ.ರಸ್ತೆಯ ವೀವರ್ಸ್ ಕಾಲೋನಿಯ ಅರುಣ್‌ಕುಮಾರ್ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ತಾನೇ ವಿಡಿಯೋ ಚಿತ್ರೀಕರಿಸಿಕೊಂಡಿರುತ್ತಾನೆ. ಅದರಲ್ಲಿ ಆತ ಹೆಸರನ್ನು ಉಲ್ಲೇಖ ಮಾಡದೇ ಕೇವಲ 'ಮಾವ' ಎಂದು ಮಾತ್ರ ಹೇಳಿದ್ದಾನೆ. ಆ ವಿಡಿಯೋವನ್ನು ಆಧರಿಸಿ ಅವನ ಮಾವನನ್ನು ಹುಡುಕಿ ಅವನ ಮೇಲೆ ಕೇಸ್ ಬುಕ್ ಮಾಡಿ ಜೈಲಿಗೆ ಕಳುಹಿಸಿದ್ದಾರೆ. ಆದರೆ, ಡಿವೈಎಸ್‌ಪಿ ಗಣಪತಿಯವರ ಆತ್ಮಹತ್ಯೆಯ ಪ್ರಕರಣದಲ್ಲಿ 'ಟಿ.ವಿ.ಯಲ್ಲಿ ಬಂದಿರುವುದು ಲೆಕ್ಕಕ್ಕಿಲ್ಲ, ಟಿ.ವಿ.ಯಲ್ಲಿ ನೀಡಿರುವ ಹೇಳಿಕೆಯಲ್ಲಿ ಆ ರೀತಿ ಹೇಳಿಲ್ಲ' ಎಂದು ಹೇಳಿಕೊಂಡು ಸರ್ಕಾರ ಇನ್ನೂ ಕೂಡ ಮೀನಾಮೇಷ ಎಣಿಸುತ್ತಿದೆ. ಈ ರೀತಿ ಸರಿಯಲ್ಲ. ಈ ಸರ್ಕಾರದ ಹೆಸರು ಜನಗಳ ಮನಸ್ಸಿನಲ್ಲಿ ಉಳಿದುಕೊಳ್ಳಬೇಕೆನ್ನುವ ಆಸೆ ಇದ್ದರೆ, ಈ ಕೂಡಲೇ ಮಾನ್ಯ ಕೆ.ಜೆ.ಜಾರ್ಜ್‌ರವರಿಂದ ರಾಜೀನಾಮೆಯನ್ನು ಕೊಡಿಸಬೇಕಾಗುತ್ತದೆ. ಅನಂತರ ತನಿಖೆ ಮಾಡಿ, ಅವರು ತಪ್ಪಿತಸ್ಥರಲ್ಲವೆಂದು ಸಾಬೀತಾಗಿ, ಕ್ಲೀನ್ ಚಿಟ್ ದೊರೆತ ನಂತರ ಅವರನ್ನು ಪುನಃ ಸಚಿವ ಸಂಪುಟಕ್ಕೆ ತೆಗೆದುಕೊಳ್ಳಲಿ ಅಥವಾ ಉಪ ಮುಖ್ಯಮಂತ್ರಿಗಳನ್ನಾಗಿ ಮಾಡಿಕೊಳ್ಳಲಿ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ, ಸರ್ಕಾರ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ, ನೂರಕ್ಕೆ ನೂರು ಭಾಗ ಅವರು ರಾಜೀನಾಮೆ ಕೊಡುವುದರಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಕೋರ್ಟ್‌ನಿಂದಾದರೂ ಆದೇಶ ಬರುತ್ತದೆ. ಕೋರ್ಟ್‌ನ ಮೂಲಕ ನಿರ್ದೇಶನ ಬಂದು ಅನಂತರ ಕ್ರಮ ತೆಗೆದುಕೊಳ್ಳುವುದಕ್ಕೆ ಬದಲಾಗಿ ಸರ್ಕಾರವೇ ಕ್ರಮ ತೆಗೆದುಕೊಂಡು ಅವರಿಂದ ರಾಜೀನಾಮೆ ಕೊಡಿಸಿ, ಅದರ ಕ್ರೆಡಿಟ್ ಅನ್ನು ಸರ್ಕಾರವೇ ತೆಗೆದುಕೊಳ್ಳಲಿ ಎನ್ನುವುದು ನನ್ನ ಒತ್ತಾಯವಾಗಿದೆ.

**ಸಭಾಪತಿಯವರು:–** ಮಾನ್ಯ ಉನ್ನತ ಶಿಕ್ಷಣ ಸಚಿವರೇ, ತಾವು ಮಾತನಾಡಿ.

**ಶ್ರೀ ಎಂ.ವಿ.ಗೋಪಾಲಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಮಾತನಾಡಲು ನನಗೆ ಒಂದೇ ಒಂದು ನಿಮಿಷ ಅವಕಾಶವನ್ನು ಕೊಡಿ, ಫೆಬ್ರವರಿ ಹತ್ತನೇ ತಾರೀಖಿನಂದು. . . .

**ಸಭಾಪತಿಯವರು:–** ನಾನು ಮಾನ್ಯ ಸಚಿವರು ಮಾತನಾಡಲು ಅವಕಾಶವನ್ನು ನೀಡಿದ್ದೇನೆ. ಮಾತನಾಡಲು ನಾನು ತಮ್ಮ ಹೆಸರನ್ನು ಕರೆದಿಲ್ಲ. ತಾವು ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ನಾನು ಹೇಳುತ್ತಿರುವುದು ತಮಗೆ ಕೇಳಿಸುತ್ತಿಲ್ಲವೇ? ನಾನು ಹೇಳುತ್ತಿರುವುದು ಕೇಳಿಸುವುದಿಲ್ಲವೆಂದರೆ, ಕಿವಿಗೆ machine ಹಾಕಿಕೊಳ್ಳಿ ಅಥವಾ volume ಹೆಚ್ಚು ಮಾಡಿಸುತ್ತೇನೆ. ಮಾತನಾಡಬೇಡಿ ಕುಳಿತುಕೊಳ್ಳಿ. ನಾನು ಮಾನ್ಯ ಸಚಿವರಿಗೆ ಮಾತನಾಡಲು ಅವಕಾಶವನ್ನು ನೀಡಿದ್ದೇನೆ.

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಇತರೆ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ಅವರುಗಳು ಈ ವಿಚಾರವನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳುವುದು ಬೇಡ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹ ಸಚಿವರು ಸ್ಪಷ್ಟವಾಗಿರುವ ಹೇಳಿಕೆಯನ್ನು ನೀಡಿದ್ದಾರೆ. ಅವರುಗಳು ಈ ರೀತಿ ಮಾಡಿದರೆ ಆಡಳಿತ ನಡೆಸುವುದು ಹೇಗೆ?

ಯಾವುದಾದರೊಬ್ಬ ಅಧಿಕಾರಿ ತನ್ನ ವೈಯಕ್ತಿಕ ಕಾರಣಗಳಿಂದಾಗಿ ಆತ್ಮಹತ್ಯೆ ಮಾಡಿಕೊಂಡರೆ, ಅದರ ಹಿನ್ನೆಲೆಯಲ್ಲಿ ಈ ರೀತಿಯ ಸನ್ನಿವೇಶಗಳು ಸೃಷ್ಟಿಯಾದರೆ ಸರ್ಕಾರ ನಡೆಸುವುದು ಹೇಗೆ? Don't demoralize the administration. ಅವರುಗಳು ಇಡೀ ಆಡಳಿತ ವ್ಯವಸ್ಥೆಗೆ ಕಪ್ಪುಚುಕ್ಕೆಯನ್ನು ತರುತ್ತಿದ್ದಾರೆ. ಮಾನ್ಯ ಕೆ.ಜೆ.ಜಾರ್ಜ್‌ರವರ ಮೇಲೆ ಯಾವ ಆಪಾದನೆಗಳು ಇವೆ ಎನ್ನುವುದನ್ನು ಅವರುಗಳು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಇಂತಹ ಪ್ರಕರಣಗಳು ದೇಶದ ಬೇರೆ ಕಡೆಗಳಲ್ಲಿ ನಡೆದಿಲ್ಲವೇ?

ಸನ್ಮಾನ್ಯ ಸಭಾಪತಿಯವರೇ, ಹೈದ್ರಾಬಾದ್ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿಯಾಗಿದ್ದ ರೋಹಿತ್ ವೇಮುಲ ಆತ್ಮಹತ್ಯೆ ಮಾಡಿಕೊಳ್ಳುವ ಸಂದರ್ಭದಲ್ಲಿ ಡೆತ್ ನೋಟ್ ಬರೆದಿಟ್ಟಿದ್ದ. ಅದರಲ್ಲಿ ತನ್ನ ಸಾವಿಗೆ ಕಾರಣವೇನು ಎನ್ನುವುದರ ಬಗ್ಗೆ ಸ್ಪಷ್ಟವಾದ ಹೇಳಿಕೆ ಇತ್ತು. ತೆಲಂಗಾಣದ ಪೊಲೀಸಿನವರು ಆ ಡೆತ್ ನೋಟ್‌ನ ಆಧಾರದ ಮೇಲೆ ಕೇಂದ್ರ ಸರ್ಕಾರದ ಹಾಲಿ ಮಂತ್ರಿ ಭಂಡಾರು ದತ್ತಾತ್ರೇಯ ಮೇಲೆ ಸಿಆರ್‌ಪಿಸಿ ಸೆಕ್ಷನ್ 174 ಮತ್ತು ಐಪಿಸಿ ಸೆಕ್ಷನ್ 306 ಅಡಿಯಲ್ಲಿ ಎಫ್.ಐ.ಆರ್. ದಾಖಲು ಮಾಡಿದರು.

**ಸಭಾಪತಿಯವರು:–** ಆ ವಿಚಾರಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದು ಬೇಡ. ಧರಣಿ ನಿರತ ಸದಸ್ಯರುಗಳನ್ನು ತಮ್ಮ ತಮ್ಮ ಸ್ಥಾನಗಳಿಗೆ ಮರಳಿ, ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡುವಂತೆ ತಾವು ಮನವಿ ಮಾಡಿಕೊಳ್ಳುತ್ತೀರಿ ಎನ್ನುವ ಕಾರಣದ ಹಿನ್ನೆಲೆಯಲ್ಲಿ ನಾನು ತಮಗೆ ಮಾತನಾಡಲು ಅವಕಾಶ ನೀಡಿದೆ. ತಾವು ಈ ಬಗ್ಗೆ ಅವರಲ್ಲಿ ಮನವಿ ಮಾಡಿಕೊಳ್ಳಿ. I want the House to be in order and the House to run smoothly. Please request them to take their seats. Don't argue.

**ಶ್ರೀ ಬಸವರಾಜ ರಾಯರೆಡ್ಡಿ:–** ಸನ್ಮಾನ್ಯ ಸಭಾಪತಿಯವರೇ, ರೆಫರೆನ್ಸ್‌ಗಾಗಿ ಮಾತನಾಡುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಉನ್ನತ ಶಿಕ್ಷಣ ಸಚಿವರೇ, ಅದೆಲ್ಲದರ ಬಗ್ಗೆ ಈಗಾಗಲೇ ಚರ್ಚೆಯಾಗಿದೆ. ತಾವು ಆ ಬಗ್ಗೆ ಮಾತನಾಡುವುದು ಬೇಡ. ಈಗ ಮಾನ್ಯ ಸಭಾ ನಾಯಕರು ಉತ್ತರ ಕೊಡುವುದಕ್ಕೆ ತಯಾರಿದ್ದಾರೆ. ವಿರೋಧ ಪಕ್ಷದ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಮರಳಿದರೆ ಸಭಾ ನಾಯಕರಿಂದ ಉತ್ತರ ಕೊಡಿಸುತ್ತೇನೆ. ಅವರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಮರಳುವಂತೆ ತಾವು ಮನವಿ ಮಾಡಿ. ಚರ್ಚೆ ಬೇಡ.

**ಶ್ರೀ ಬಸವರಾಜ ರಾಯರೆಡ್ಡಿ:–** ಸನ್ಮಾನ್ಯ ಸಭಾಪತಿಯವರೇ, ಹೈದ್ರಾಬಾದ್ ವಿಶ್ವವಿದ್ಯಾಲಯದ ಪ್ರಕರಣದಲ್ಲಿ ಮಂತ್ರಿಗಳ ಮೇಲೆ ಎಫ್.ಐ.ಆರ್. ದಾಖಲು ಮಾಡಿದ್ದರೂ ಸಹ ಅವರು ರಾಜೀನಾಮೆ ನೀಡಲಿಲ್ಲ. ಆದ್ದರಿಂದ ಈ ಪ್ರಕರಣದಲ್ಲಿ ಮಾನ್ಯ ಕೆ.ಜೆ.ಜಾರ್ಜ್‌ರವರ ರಾಜೀನಾಮೆಗೆ ಒತ್ತಾಯಿಸುವುದು ಉಚಿತವಲ್ಲ. ಇದರ ಬಗ್ಗೆ ಸುದೀರ್ಘವಾಗಿ ವಿಚಾರ ಮಾಡುವುದಕ್ಕೆ ಹಾಗೂ ಸುಗಮವಾಗಿ ಸದನ ನಡೆಸುವುದಕ್ಕೆ ಅನುವು ಮಾಡಿಕೊಡಬೇಕೆಂದು ಮಾನ್ಯ ವಿರೋಧ ಪಕ್ಷದ ಸದಸ್ಯರುಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಮರಳಿ ಸದನ ನಡೆಸುವುದಕ್ಕೆ ಅನುವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ಸಭಾ ನಾಯಕರು ಉತ್ತರ ಕೊಡುವುದಕ್ಕೆ ಸಿದ್ಧರಿದ್ದಾರೆ ಅವರಿಗೆ ಉತ್ತರ ಕೊಡಲು ಹೇಳುತ್ತೇನೆ.

**(ಈ ಹಂತದಲ್ಲಿ ಸದನದ ಬಾವಿಯೊಳಗೆ ಧರಣಿ ನಿರತ ವಿರೋಧ ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧ 'ಮಾತು ಸಾಕು, ರಾಜೀನಾಮೆ ಬೇಕು' ಎನ್ನುವ ಘೋಷಣೆಗಳನ್ನು ಕೂಗಿದರು.)**

## 2. ಪ್ರಕಟಣೆಗಳು

**ಸಭಾಪತಿಯವರು:–** (ಅ) ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 104ನೇ ನಿಯಮದ ಮೇರೆಗೆ ವಿದಾನಸಭೆಯು ದಿನಂಕ:14.07.2016ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿದೆಯೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ಸ್ಟ್ಯಾಂಪ್(ನಾಲ್ಕನೇ ತಿದ್ದುಪಡಿ) ವಿಧೇಯಕ, 2016

2. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ, 2016
3. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ (ತಿದ್ದುಪಡಿ) ವಿಧೇಯಕ 2016
4. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ) ವಿಧೇಯಕ 2016

(ಆ) ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 104ನೇ ಮೇರೆಗೆ ವಿದಾನಸಭೆಯು ದಿನಾಂಕಃ14.07.2016ರಂದು ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಮತ್ತು ವಿಧಾನ ಪರಿಷತ್ತಿನಲ್ಲಿ ತಿದ್ದುಪಡಿಗಳೊಂದಿಗೆ ಅಂಗೀಕಾರವಾಗಿರುವ ರೂಪದಲ್ಲಿರುವ 2016ನೇ ಸಾಲಿನ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ವಿಧೇಯಕವನ್ನು ಪುನರ್ ಪರ್ಯಾಲೋಚಿಸಿ ಅಂಗೀಕರಿಸಿತೆಂದು ತಿಳಿಸಿರುತ್ತಾರೆ.

## 3.ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ(ಕ.ವಿ.ಪ)ಃ–** ಕರ್ನಾಟಕ ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಮುಂದಿನ ವಿಧೇಯಕಗಳನ್ನು ಸಭೆಯ ಮುಂದಿಡುವುದು.

1. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ) ವಿಧೇಯಕ, 2016
2. ಕರ್ನಾಟಕ ಸ್ಟ್ಯಾಂಪ್(ನಾಲ್ಕನೇ ತಿದ್ದುಪಡಿ) ವಿಧೇಯಕ, 2016
3. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ (ತಿದ್ದುಪಡಿ) ವಿಧೇಯಕ, 2016
4. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ, 2016

## 4.ಶಾಸನ ರಚನೆ

## ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

### (ಅ)ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ) ವಿಧೇಯಕ, 2016

### ಪರ್ಯಾಲೋಚನಾ ಪ್ರಸ್ತಾವ

**ಡಾಃಜಿ.ಪರಮೇಶ್ವರ್(ಸಭಾ ನಾಯಕರು, ಮುಖ್ಯಮಂತ್ರಿಗಳ ಪರವಾಗಿ)ಃ–** ಸನ್ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈಗ ವಿಧಾನ ಪರಿಷತ್ತಿಗೆ ಬಂದಿರುವಂತಹ 2016ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಡಾಃಜಿ.ಪರಮೇಶ್ವರ್ (ಸಭಾನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, . . . . .

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ಸದನ ತಹಬದಿಯಲ್ಲಿ ಇಲ್ಲವೆಂದು ಸರ್ಕಾರದ ಮುಖ್ಯ ಸಚೇತಕರೇ ಹೇಳಿದ್ದಾರೆ. ಆದರೂ ಸಹ ಇವರು ವಿಧೇಯಕಕ್ಕೆ ಅಂಗೀಕಾರವನ್ನು ಪಡೆದುಕೊಳ್ಳುತ್ತಿದ್ದಾರೆ. ಅವರ ಮಾತಿಗೂ ಬೆಲೆ ಕೊಡುತ್ತಿಲ್ಲ. ತಮ್ಮ ಮಾತನ್ನು ಕೇಳುವುದಿಲ್ಲವೆಂದರೆ, ಅವರ ಮಾತಿನ ಆಧಾರದ ಮೇಲಾದರೂ ರಾಜೀನಾಮೆಯನ್ನು ತೆಗೆದುಕೊಳ್ಳಬೇಕಾಗಿದೆ.

**(ಗೊಂದಲ)**

**ಡಾಃಜಿ.ಪರಮೇಶ್ವರ್ಃ–** ಸನ್ಮಾನ್ಯ ಸಭಾಪತಿಯವರೇ, ಕೆಲವೊಂದು ತಿದ್ದುಪಡಿಗಳೊಂದಿಗೆ ಈ ವಿಧೇಯಕವನ್ನು ತಂದಿದ್ದೇವೆ. ದಯಮಾಡಿ ಸದನ ಈ ವಿಧೇಯಕಕ್ಕೆ ಅನುಮತಿಯನ್ನು ನೀಡಬೇಕಾಗಿ ಕೋರುತ್ತಿದ್ದೇನೆ.

**(ಈ ಹಂತದಲ್ಲಿ ಸದನದ ಬಾವಿಯೊಳಗೆ ಧರಣಿ ನಿರತ ವಿರೋಧ ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧ 'ವಿಧೇಯಕ ಬೇಡ, ರಾಜೀನಾಮೆ ಬೇಕು' ಎನ್ನುವ ಘೋಷಣೆಗಳನ್ನು ಕೂಗುತ್ತಿದ್ದರು.)**

**(ಗೊಂದಲ)**

**ಸಭಾಪತಿಯವರುಃ–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2016ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರುಃ–** ಖಂಡ 2 ಈ ವಿಧೇಯಕದ ಭಾಗವಾಗಿರುತ್ತದೆ.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರುಃ–** ಪ್ರಸ್ತಾವ ಏನೆಂದರೆ;

"ಮೊದಲನೆ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)**

**ಪ್ರಸ್ತಾವದ ಅಂಗೀಕಾರ**

**ಡಾಃಜಿ.ಪರಮೇಶ್ವರ್(ಸಭಾನಾಯಕರು, ಮುಖ್ಯಮಂತ್ರಿಗಳ ಪರವಾಗಿ)ಃ–** ಸನ್ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2016ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರುಃ–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2016ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಗೊಂದಲ)**

**(ಆ) ಕರ್ನಾಟಕ ಸ್ಟಾಂಪು (ನಾಲ್ಕನೇ ತಿದ್ದುಪಡಿ) ವಿಧೇಯಕ, 2016**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):–** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ಅಂಗೀಕೃತರೂಪದಲ್ಲಿರುವ 2016ರ ಕರ್ನಾಟಕ ಸ್ಟಾಂಪು(ನಾಲ್ಕನೇ ತಿದ್ದುಪಡಿ)ವಿಧೇಯಕ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಗಳೆ, ಗಣಿಗಾರಿಕೆಗೆ ಸಂಬಂಧಪಟ್ಟಂತೆ ಸ್ಟಾಂಪ್ ಡ್ಯೂಟಿ ವಿಧಿಸುವ ಸಂದರ್ಭದಲ್ಲಿ (ಗೊಂದಲ) . . . ಸ್ಥಿರಾಸ್ತಿಗಳನ್ನು ಹೇಗೆ ಲೀಜ್‌ಗೆ ಕೊಡುತ್ತೇವೆಯೋ . . .(ಗೊಂದಲ) ಮೊದಲು ಆ ರೀತಿ ಇತ್ತು. ಇದು ಸೂಕ್ತವಾದುದಲ್ಲ, ಸೀಮಿತ ಅವಧಿಗೆ ಕೊಡುವಂಥದ್ದಾಗಬೇಕೆಂದು ಸುಪ್ರೀಂ ಕೋರ್ಟ್‌ನವರು 2015ನೇ ಸಾಲಿನಲ್ಲಿ ತೀರ್ಪು ಕೊಟ್ಟಿದ್ದಾರೆ. ಈ ನಿಟ್ಟಿನಲ್ಲಿ ಬದಲಾವಣೆ ತರಬೇಕಾಗಿದ್ದು ಮತ್ತು ಬೇರೆ ರಾಜ್ಯಗಳಲ್ಲಿ ಇದರ ವ್ಯವಸ್ಥೆ ಯಾವರೀತಿ ಇದೆ ಎನ್ನುವುದನ್ನು ತಿಳಿದುಕೊಂಡು ಸೂಕ್ಷ್ಮವಾಗಿ ಸ್ಟಾಂಪ್ ಡ್ಯೂಟಿ ವಿಧಿಸುವಾಗ, 1 ವರ್ಷದಿಂದ 10 ವರ್ಷದ ಅವಧಿಯೊಳಗಿದ್ದರೆ ರೂ. 100ಕ್ಕೆ ರೂ. 1 ರಂತೆ, 10 ವರ್ಷದಿಂದ 20 ವರ್ಷಗಳ ಅವಧಿಯೊಳಗಿದ್ದರೆ ಪ್ರತಿ ರೂ.100ಕ್ಕೆ ರೂ.2 ರಂತೆ, 20 ವರ್ಷಗಳಿಂದ 30 ವರ್ಷದ ಅವಧಿಯೊಳಗಿದ್ದರೆ ಪ್ರತಿ ರೂ.100 ಗೆ ರೂ.3 ರಂತೆ ಮತ್ತು 30 ವರ್ಷಕ್ಕಿಂತ ಮೇಲ್ಪಟ್ಟಿದ್ದರೆ ಪ್ರತಿ ರೂ.100 ಕ್ಕೆ ರೂ. 5ನ್ನು ನಿಗದಿಪಡಿಸಲಾಗಿದೆ. ಒಟ್ಟಿನಲ್ಲಿ ಸರಳಗೊಳಿಸುವ ಉದ್ದೇಶದಿಂದ ತಿದ್ದುಪಡಿ ತರಲಾಗಿದೆ.

**ಸಭಾಪತಿಗಳು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2016ರ ಕರ್ನಾಟಕ ಸ್ಟಾಂಪು(ನಾಲ್ಕನೇ ತಿದ್ದುಪಡಿ)ವಿಧೇಯಕ ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

**ಸಭಾಪತಿಗಳು:–** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3ನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

**ಸಭಾಪತಿಗಳು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿಏ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ **ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):–** ಮಾನ್ಯ ಸಭಾಪತಿಗಳೆ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿ 2016ರ ಕರ್ನಾಟಕ ಸ್ಟಾಂಪು (ನಾಲ್ಕನೇ ತಿದ್ದುಪಡಿ) ವಿಧೇಯವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಗಳು:–** ಪ್ರಸ್ತಾವ ಏನೆಂದರೆ;

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ "2016ರ ಕರ್ನಾಟಕ ಸ್ಟಾಂಪು (ನಾಲ್ಕನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಇ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ (ತಿದ್ದುಪಡಿ)ವಿಧೇಯಕ, 2016**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೆ.ಜೆ.ಜಾಜ್ (ಬೆಂಗಳೂರು ಅಭಿವೃದ್ಧಿ ಹಾಗೂ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಸಚಿವರು):–** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ಅಂಗೀಕೃತರೂಪದಲ್ಲಿರುವ 2016ರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ(ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

**ಶ್ರೀ ಕೆ.ಜೆ.ಜಾರ್ಜ್:–** ಮಾನ್ಯ ಸಭಾಪತಿಗಳೆ, ಈ ಹಿಂದೆ 1200 ಮತ್ತು 2400 ಚದರ ಅಡಿಗಿಂತ ಹೆಚ್ಚು ವಿಸ್ತೀರ್ಣದ ನಿವೇಶನ ಇದ್ದರೆ ಮಳೆ ಕೊಯ್ಲು ಮಾಡಬೇಕು ಎಂದಿತ್ತು. 1200 ಚದರ ಅಡಿ ಮತ್ತು 2400 ಚದರ ಅಡಿ ಎಂದು ಹೇಳುವುದರ ಬದಲಾಗಿ ಕ್ರಮವಾಗಿ 216 ಚದರ ಮೀಟರ್ ಹಾಗೂ 108 ಚದರ ಮೀಟರ್ ಎಂದು ಬದಲಾವಣೆ ಮಾಡುತ್ತಿದ್ದೇವೆ.

**ಸಭಾಪತಿಗಳು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2016ರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

**ಸಭಾಪತಿಗಳು:–** "ಖಂಡ 2 ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 2 ಇತ್ಯಾದಿ

**ಸಭಾಪತಿಗಳು:–** ಪ್ರಸ್ತಾವನೆ ಏನೆಂದರೆ;

"ಮೊದಲನೆ ಖಂಡ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ **ಶ್ರೀ ಕೆ.ಜೆ.ಜಾಜ್ (ಬೆಂಗಳೂರು ಅಭಿವೃದ್ಧಿ ಹಾಗೂ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಸಚಿವರು):–** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿ 2016ರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ(ತಿದ್ದುಪಡಿ)ವಿಧೇಯಕ ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಗಳು:–** ಪ್ರಸ್ತಾವ ಏನೆಂದರೆ;

ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ "2016ರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ(ತಿದ್ದುಪಡಿ)ವಿಧೇಯಕ ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

(ಈ) **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ, 2016**

<u>ಪರ್ಯಾಲೋಚನಾ ಪ್ರಸ್ತಾವ</u>

**ಶ್ರೀ ಬಸವರಾಜ್ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):**–ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ಅಂಗೀಕೃತರೂಪದಲ್ಲಿರುವ 2016ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ(ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

<u>ಪ್ರಸ್ತಾವವನ್ನು ಮಂಡಿಸಲಾಯಿತು</u>

**ಶ್ರೀ ಬಸವರಾಜ್ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):**–_ಮಾನ್ಯ ಸಭಾಪತಿಗಳೆ, ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಇಡೀ ರಾಷ್ಟ್ರದ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಿ ಕೊಡುವ ಅವಕಾಶವನ್ನು ಹಿಂದಿನ ವಿಧೇಯಕದಲ್ಲಿ ಕೊಡಲಾಗಿತ್ತು. ಆದರೆ ಇತ್ತೀಚಿಗೆ ಛತ್ತೀಸ್‌ಗಡ್ ರಾಜ್ಯದಲ್ಲಿ ಆದಂತಹ ಪ್ರಕರಣದ ಹಿನ್ನೆಲೆಯಲ್ಲಿ ಪ್ರೊ:ಯಶ್‌ಪಾಲ್‌ರವರ ಶಿಫಾರಸ್ಸಿನಂತೆ ಮತ್ತು ಯುಜಿಸಿಯ ಶಿಫಾರಸ್ಸಿನಂತೆ, ಇದು ರಾಜ್ಯಕ್ಕೆ ಮಾತ್ರ ಸೀಮಿತವಾಗಿರಬೇಕು, ಹೊರ ರಾಜ್ಯದಲ್ಲಿ ಇದಕ್ಕೆ ಪ್ರವೇಶಾವಕಾಶ ಕೊಡಬಾರದು ಎಂದು ನಿರ್ದೇಶನ ನೀಡಿದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಆ್ಯಕ್ಟ್‌ಗೆ ತಿದ್ದುಪಡಿಯನ್ನು ತರಲಾಗಿದೆ. ಸುಪ್ರೀಂ ಕೋರ್ಟ್ ಮತ್ತು ಯುಜಿಸಿಯವರ ಆದೇಶದಂತೆ ಇದನ್ನು ಮಾಡಲಾಗಿದೆ. ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:**– ಪ್ರಸ್ತಾವ ಏನೆಂದರೆ,

**"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2016ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"**

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರವರೆಗೆ**

**ಸಭಾಪತಿಯವರು:**– "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

**(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:**– ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):**– ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2016ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:**– ಪ್ರಸ್ತಾವ ಏನೆಂದರೆ,

**"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2016ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"**

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು</u>**

**5. <u>ವಿಧೇಯಕವನ್ನು ಹಿಂದಕ್ಕೆ ಪಡೆಯುವುದು</u>**

**ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ, 2014**

**ಹಿಂಪಡೆಯುವ ಪ್ರಸ್ತಾವ**

**ಡಾ॥ಜಿ.ಪರಮೇಶ್ವರ(ಸಭಾನಾಯಕರು)(ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೆ, 2014ನೇ ಸಾಲಿನ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯಲು ಅನುಮತಿ ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

**"2014ನೇ ಸಾಲಿನ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯಲು ಅನುಮತಿಯನ್ನು ಕೋರುವುದು"**

**ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ ಮತ್ತು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ವಿಧೇಯಕವನ್ನು ಹಿಂದಕ್ಕೆ ತೆಗೆದುಕೊಳ್ಳಬಹುದು.**

**ಡಾ॥ಜಿ.ಪರಮೇಶ್ವರ(ಸಭಾನಾಯಕರು)(ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೆ, 2014ನೇ ಸಾಲಿನ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಹಿಂದಕ್ಕೆ ತೆಗೆದುಕೊಂಡಿದ್ದೇನೆ.

**ಸಭಾಪತಿಯವರು:–** ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ, 2014ನ್ನು ಹಿಂಪಡೆಯಲಾಯಿತು.

ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡಿದ್ದೇನೆ.

**(ಸದನವು ಮಧ್ಯಾಹ್ನ 12 ಗಂಟೆ 24 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 18ನೇ ಜುಲೈ 2016ರ ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**